5C.R.P.67

| |
|---|
| Form No.4 (Civil) Deposition Sheets (R.P.No.57) |

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 97/2021

ದಿನಾಂಕ ಃ 29.07.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ:29 ಪಿ.ಡಬ್ಲ್ಯೂ :23

| | |
|---|---|
| ಸಾಕ್ಷಿದಾರರ ಹೆಸರು | ದೀಕ್ಷಿತ್ ಕುಮಾರ್ |
| ತಂದೆಯ ಹೆಸರು | ಪ್ರಭಾಕರನ್ ಕೆ ಎನ್ |
| ವಯಸ್ಸು | 35 ವರ್ಷ |
| ಉದ್ಯೋಗ | ಪಿ ಎಸ್ ಐ, ಕೆರಗೋಡು ಪೊಲೀಸ್ ಠಾಣೆ |
| ವಾಸ | ಕೆರಗೋಡು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1) ದಿಃ 24.04.2020 ರಿಂದ ದಿಃ 14.06.2021 ರವರೆಗೆ ನಾನು ಮಂಡ್ಯ ಕೇಂದ್ರ ಪೊಲೀಸ್ ಠಾಣೆ ಪಿಎಸ್ಐ ಆಗಿ ಕಾರ್ಯ ನಿರ್ವಹಿಸಿದ್ದೆನು.

2) ದಿಃ 28.04.2021 ರಂದು ನಾನು ಠಾಣಾ ಪ್ರಭಾರದಲ್ಲಿ ಇದ್ದಾಗ, ಬೆಳಗ್ಗೆ 6.30 ಗಂಟೆ ಸಮಯದಲ್ಲಿ, ಫ್ರಾಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕಯಂತ್ರ ಮುದ್ರಿತ ದೂರನ್ನು ಪಡೆದು ಸ್ವೀಕರಿಸಿ, ಸದರಿ ದೂರಿನ ಆಧಾರದ ಮೇರೆಗೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ಇಲಾಖಾ ಮೇಲಾಧಿಕಾರಿಗಳಿಗೂ ಮತ್ತು ನ್ಯಾಯಾಲಯಕ್ಕೂ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿಯ ಸದರಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.1 ಎಂದು ಗುರುಸಿತಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು

ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.38 ಎಂದು, ಸಾಕ್ಷಿಯ ಸಹಿಯನ್ನು ನಿಪಿ.38(ಎ) ಎಂದು ಗುರುತಿಸಲಾಯಿತು .

3) ಅದೇ ದಿನ ಮೃತನ ಶವವನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಯ ಶವಾಗಾರದಲ್ಲಿ ಇರಿಸಿಕೊಳ್ಳುವಂತೆ ಮಿಮ್ಸ್ ಆಸ್ಪತ್ರೆಯ ವೈದ್ಯಾಧಿಕಾರಿಯವರಿಗೆ ಮನವಿ ನೀಡಿರುತ್ತೇನೆ. ಸಾಕ್ಷಿಯು ಮನವಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.39 ಎಂದು, ಸಾಕ್ಷಿಯ ಸಹಿಯನ್ನು ನಿಪಿ.39 (ಎ ) ಎಂದು ಗುರುತಿಸಲಾಯಿತು.

4) ಸದರಿ ಶವದ ವಾರಸುದಾರರ ಪತ್ತೆಗಾಗಿ ಪ್ರಾಸಾ.19- ಸಿ.ಹೆಚ್.ಸಿ 210 ರವರನ್ನು ನೇಮಿಸಿರುತ್ತೇನೆ. ಶವದ ವಾರಸುದಾರರ ಪತ್ತೆಗಾಗಿ ವಾರ್ತಾಧಿಕಾರಿಯವರಿಗೆ ಮನವಿ ನೀಡಿರುತ್ತೇನೆ. ಈ ಪ್ರಕರಣವು ಘೋರ ಪ್ರಕರಣವಾದ್ದರಿಂದ ಪ್ರಕರಣದ ಕಡತವನ್ನು ಚಾಸಾ.30 ರವರಿಗೆ ಮುಂದಿನ ತನಿಖೆಗಾಗಿ ಹಸ್ತಾಂತರಿಸಿರುತ್ತೇನೆ.

5) ಅದೇ ದಿನ ಸದರಿ ಚಾಸಾ. 30 ರವರು ಆರೋಪಿಯನ್ನು ದಸ್ತಗಿರಿ ಮಾಡಿ ಹಾಜರು ಪಡಿಸುವಂತೆ ಜ್ಞಾಪನ ಪತ್ರವನ್ನು ಸ್ವೀಕರಿಸಿರುತ್ತೇನೆ. ಆರೋಪಿ

6) ಅದೇ ದಿನ ಸಂಜೆ 6.30 ಗಂಟೆ ಸಮಯದಲ್ಲಿ, ನಮ್ಮ ಠಾಣಾ ಸಿಬ್ಬಂದಿ ಪ್ರಾಸಾ. 18 ಮತ್ತು ಚಾಸಾ. 22 ರವವರೊಂದಿಗೆ ಆರೋಪಿಯ ಪತ್ತೆಗೆ ತೆರಳಿ, ಸದರಿ ಆರೋಪಿಯನ್ನು ಮಂಡ್ಯ ನಗರದ ಗೂಬೆ ಹಳ್ಳದ ಆಂಜನೇಯ ದೇವಸ್ಥಾನದ ಬಳಿ ವಶಕ್ಕೆ ಪಡೆದು, ಅದೇ ದಿನ ಸಂಜೆ 7.00 ಗಂಟೆ ಸಮಯದಲ್ಲಿ ಚಾಸಾ.30 ರವರ ಮುಂದೆ ವರದಿಯೊಂದಿಗೆ ಹಾಜರು ಪಡಿಸಿರುತ್ತೇನೆ. ಸಾಕ್ಷಿಯು ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ. 40 ಎಂದು, ಸಾಕ್ಷಿಯ ಸಹಿಯನ್ನು ನಿಪಿ.40(ಎ) ಎಂದು ಗುರುತಿಸಲಾಯಿತು.

7) ದಿಃ 29.04.2021 ರಂದು ಮೃತರ ವಾರಸುದಾರರ ಪತ್ತೆಗಾಗಿ ಚಾಸಾ.30 ರವರ ಆದೇಶದ ಮೇರೆಗೆ ಫ್ರಾಸಾ. 19 ರವರನ್ನು ನೇಮಕ ಮಾಡಿರುತ್ತೇನೆ. ಸಾಕ್ಷಿಯು ದಿಃ28.04.2021 ರ ಜ್ಞಾಪನವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.41 ಎಂದು, ಸಾಕ್ಷಿಯ ಸಹಿಯನ್ನು ನಿಪಿ.41(ಎ) ಎಂದು ಗುರುತಿಸಲಾಯಿತು.

8) ಸದರಿ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಮತಿ ಡಿಎಸ್ ಕೆ ವಕೀಲರಿಂದ ಃ ಸಹಾಯಕ defene counsel ರವರಿಂದ ಃ**

9) ಪ್ರಕರಣವನ್ನು ದಾಖಲು ಮಾಡಿದ ನಂತರ ನಾನು ಘಟನಾ ಸ್ಥಳಕ್ಕೆ ಹೋಗಿದ್ದೆನು. ಆ ಸಮಯದಲ್ಲಿ ನಾನು ಅಲ್ಲಿದ್ದ ಸಿಸಿಟಿವಿ ಫುಟೇಜ್ ಗಳನ್ನು ಪರಿಶೀಲಿಸಿಲ್ಲ. ಚಾಸಾ.30 ರವರು ಆರೋಪಿಯನ್ನು ಪತ್ತೆ ಮಾಡಲು ನಿರ್ದೇಶನ ನೀಡಿದ ಸಮಯದಲ್ಲಿ ಫೋಟೋ ಏನಾದರೂ ನೀಡಿದ್ದರೆ ಎಂದರೆ ಸಾಕ್ಷಿಯು, ಮಹಜರ್ ಕಾಲದಲ್ಲಿ ವಶಪಡಿಸಿಕೊಂಡು ಸಿ.ಸಿ.ಟಿ.ವಿ. ಫುಟೇಜ್ ಆಧಾರದ ಮೇರೆಗೆ ನಮಗೆ ನಿರ್ದೇಶನ ನೀಡಿದ್ದರು ಎಂದು ನುಡಿಯುತ್ತಾರೆ. ನಮ್ಮ ಹಿರಿಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ.30 ರವರು ಆರೋಪಿಯನ್ನು ಪತ್ತೆ ಮಾಡಲು ನಮಗೆ ನಿರ್ದೇಶನ ನೀಡದೇ ಇದ್ದರೂ ಸಹ ಅನಧಿಕೃತವಾಗಿ ನಾನು ಆರೋಪಿಯ ಪತ್ತೆಗೆ ಹೋಗಿದ್ದೆನು ಎಂದರೆ ಸರಿಯಲ್ಲ. ಮಿಮ್ಸ್ ಆಸ್ಪತ್ರೆಗೆ ನಿಪಿ.39 ರಂತೆ ಮನವಿಯನ್ನು ನೀಡಿದ್ದೆನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಮಂಡ್ಯ ನಗರದ ಗೂಳಿ ಹಳ್ಳದಲ್ಲಿ ಇರುವ ಆಂಜನೇಯ ದೇವಸ್ಥಾನದ ಬಳಿ ಆರೋಪಿಯನ್ನು ವಶಕ್ಕೆ ಪಡೆದಿದ್ದೆವು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆತನನ್ನು, ಆತನ ಮನೆಯಿಂದ ವಶಕ್ಕೆ ಪಡೆದಿದ್ದೆವು ಎಂದರೆ ಸರಿಯಲ್ಲ. ಮೃತನ ವಾರಸುದಾರರ ಪತ್ತೆಗಾಗಿ ಫ್ರಾಸಾ. 19 ರವರನ್ನು ನೇಮಕ ಮಾಡಿದ್ದೆನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.ಈ ಬಗ್ಗೆ ದಾಖಲಾತಿಗಳನ್ನು ಠಾಣೆಯಲ್ಲಿ ಕುಳಿತು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಫ್ರಾಸಾ. 6 ರವರೊಂದಿಗೆ ನಾನು ಶಾಮೀಲಾಗಿ, ಫ್ರಾಸಾ. 1 ರವರ ಹೆಸರಿನಲ್ಲಿ ದೂರನ್ನು ಸೃಷ್ಟಿಸಿದ್ದೇನೆ

ಎಂದರೆ ಸರಿಯಲ್ಲ. ಘೋರ ಪ್ರಕರಣವಾದುದರಿಂದ ಹಿರಿಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ನಾನು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇರುವುದಿಲ್ಲ.**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(**ಶಿವಪ್ರಸಾದ್ ಕೆ.ಬಿ**)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.